ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಚನ್ನಗಿರಿ ಕ್ಷೇತ್ರದ ವ್ಯಾಪ್ತಿಗೆ ಬರುವ ಐ.ಟಿ. ರಸ್ತೆಗಳ ಬಗ್ಗೆ

2719 (3383) ಶ್ರೀ ವಡ್ನಾಳ್ ರಾಜಣ್ಣ (ಚನ್ನಗಿರಿ): ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಚನ್ನಗಿರಿ ಕ್ಷೇತ್ರದ ವ್ಯಾಪ್ತಿಗೆ ಬರುವ ಐ.ಟಿ. ರಸ್ತೆಗಳು ಎಷ್ಟು ಕಿ.ಮೀ ಇರುತ್ತದೆ; (ವಿವರ ನೀಡುವಿರಾ)

ಆ) ಈ ಐ.ಟಿ. ರಸ್ತೆಗಳಲ್ಲಿ ಎಷ್ಟು ಕಿ.ಮೀ ಉದ್ದಕ್ಕೆ ಜಲ್ಲಿ ರಸ್ತೆ ನಿರ್ಮಾಣ ಮಾಡಲಾಗುವುದು (ವಿವರ ನೀಡುವಿರಾ)

ಇ) ಬಾಕಿ ಉಳಿದಿರುವ ಐ.ಟಿ ರಸ್ತೆಗಳ ಜಲ್ಲಿ ರಸ್ತೆ ನಿರ್ಮಾಣವನ್ನು ಎಂದು ಕೈಗೆತ್ತಿಕೊಳ್ಳಲಾಗುವುದು;

ಈ) ಅಚ್ಚುಕಟ್ಟುವಿನಲ್ಲಿ ವರ್ಷದ ಎರಡು ಬಾರಿ ನೀರು ನಿಲುಗಡೆ ಮಾಡಿದಾಗಲೇ ಕಾಮಗಾರಿ ಗಳನ್ನು ಕೈಗೊಳ್ಳದೇ ನೀರು ಬಿಟ್ಟು ತರಾತುರಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವುದು ಸರಿಯೇ; (ತಿಳಿಸುವಿರಾ)

ಉ) ನೀರಾವರಿ ಕ್ಷೇತ್ರದ ವಿವಿಧ ನಿರ್ವಹಣೆಗಳನ್ನು ಮಾಡಲು ನಿಗಧಿಯಾಗಿರುವ ಅನುಧಾನವನ್ನು ಯಾವ ಅನುಪಾತದಲ್ಲಿ ನಿಗಧಿ ಪಡಿಸಲಾಗುವುದು? (ತಿಳಿಸುವಿರಾ)

ಶ್ರೀ ಎಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ಚನ್ನಗಿರಿ ಕ್ಷೇತ್ರದ ವ್ಯಾಪ್ತಿಯಲ್ಲಿನ ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ಒಟ್ಟು 203.60 ಕಿ.ಮೀ. ಉದ್ದದ ಐ.ಟಿ. ರಸ್ತೆ ಇರುತ್ತದೆ.

ಆ) ಈ ಐ.ಟಿ. ರಸ್ತೆಗಳಲ್ಲಿ ಒಟ್ಟು 173.60ಮೀ. ಉದ್ದ ಜಲ್ಲಿ ರಸ್ತೆ ನಿರ್ಮಾಣ ಮಾಡಲಾಗಿದೆ.;

ಇ) ಅನುದಾನದ ಲಭ್ಯತೆ ಅನುಸರಿಸಿ ಅಧ್ಯತೆಮೇಲೆ ಬಾಕಿ ಐ.ಟಿ. ರಸ್ತೆಗಳಲ್ಲಿ ರಸ್ತೆ ನಿರ್ಮಾಣವನ್ನು ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುವುದು.

ಈ) ಸರಿಯಲ್ಲ.

ಉ) ಪ್ರತಿ ಹೆಕ್ಟೇರ್ ಆಧಾರದ ಮೇಲೆ ನಿಗಧಿ ಪಡಿಸಿದ ಅನುದಾನದಲ್ಲಿ ವಿತರಿಸಲಾಗುವುದು.

ರಾಜ್ಯದಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸರಬರಾಜು

2720 (3235) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಇಂಧನ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗಾಗಿ ಪ್ರತಿ ತಿಂಗಳು ಎಷ್ಟು ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ,

ಆ) ಈ ವಿದ್ಯುತ್‌ಗೆ ಯಾವ ದರ ವಿಧಿಸಲಾಗುತ್ತಿದೆ;

ಇ) ಅನಧಿಕೃತ ವಿದ್ಯುತ್ ಸಂಪರ್ಕ ಪಡೆದ ಎಷ್ಟು ಪ್ರಕರಣಗಳು ಕೆ.ಪಿ.ಸಿ.ಸಿ. ಗಮನಕ್ಕೆ ಬಂದಿದೆ, ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ;

ಶ್ರೀ ವೀರಕುಮಾರ್ ಎ. ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ಪ್ರತಿ ಜಿಲ್ಲೆಯಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗಾಗಿ ಪ್ರತಿ ತಿಂಗಳ ಸರಾಸರಿ ವಿದ್ಯುತ್ ಬಳಕೆಯ (ದಶಲಕ್ಷ ಯೂನಿಟ್ಸ್‌ಗಳಲ್ಲಿ) ವಿವರಗಳನ್ನು ಅನುಬಂಧದಲ್ಲಿನೀಡಿದೆ.

ಆ) ನೀರಾವರಿ ಪಂಪ್‌ಸೆಟ್‌ಗಳಿಗೆ ಜುಲೈ 1998ರಿಂದ ಜಾರಿಯಲ್ಲಿರುವ ವಿದ್ಯುಚ್ಛಕ್ತಿ ದರಗಳ ಪ್ರಕಾರ ಕೆಳಕಂಡಂತೆ ದರ ವಿಧಿಸಲಾಗುತ್ತಿದೆ.

1) 10 ಹೆಚ್.ಪಿ. ಸೇರಿದಂತೆ 10 ಹೆಚ್.ಪಿ.ವರೆಗಿನ ಪಂಪ್‌ಸೆಟ್ ಸ್ಥಾವರಗಳಿಗೆ ಪ್ರತಿ ಅಶ್ವ ಶಕ್ತಿಗೆ (ಹೆಚ್.ಪಿ) ಪ್ರತಿ ವರ್ಷಕ್ಕೆ 300-00ರೂಗಳನ್ನು ವಿಧಿಸಲಾಗುತ್ತಿದೆ.

2) 10 ಹೆಚ್.ಪಿ.ಗಿಂತ ಹೆಚ್ಚಿನ ಸಾಮರ್ಥ್ಯದ ಪಂಪ್ ಸೆಟ್ ಸ್ಥಾವರ್‌ಗಳಿಗೆ ಪ್ರತಿ ಹೆಚ್.ಪಿ.ಗೆ ವಾರ್ಷಿಕ ಕನಿಷ್ಟ 500-00 ರೂ. ನಿಬಂಧನೆಗೊಳಪಟ್ಟು ಬಳಸಿದ ಎಲ್ಲಾ ಯೂನಿಟ್‌ಗಳಿಗೆ ಪ್ರತಿ ಯೂನಟ್‌ಗೆ 80 ಪೈಸೆ ವಿಧಿಸಲಾಗುತ್ತಿದೆ.

ಇ) ದಿನಾಂಕ : 31-12-99ರಲ್ಲಿದ್ದಂತೆ, ರಾಜ್ಯದಲ್ಲಿ ಗುರ್ತಿಸಲಾಗಿದ್ದ ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಪಡೆದ ನೀರಾವರಿ ಪಂಪ್‌ಸೆಟ್‌ಗಳ ಸಂಖ್ಯೆ ಒಟ್ಟು 95,977. ರಾಜ್ಯದಲ್ಲಿನ ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಬಳಕೆದಾರರು ತಮ್ಮ ಅನಧಿಕೃತಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿ ಕೊಳ್ಳಲು ಅನುಕೂಲವಾಗುವಂತೆ ಒಂದುಕಾರ್ಯಕ್ರಮವನ್ನು ಕ.ವಿ.ಪ್ರ.ನಿ.ನಿ., ಯು (ಹಿಂದಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ) ದಿನಾಂಕ: 1-1-1997ರಿಂದ ಜಾರಿಗೆತಂದಿರುತ್ತದೆ. ಈ ಕಾರ್ಯಕ್ರಮದಡಿಯಲ್ಲಿ, ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳ ಬಳಕೆದಾರರು ಕ.ವಿ.ಪ್ರ ನಿಗಮಕ್ಕೆ ಒಂದು ನಿರ್ದಿಷ್ಟ ಮೊತ್ತವನ್ನುಪಾವತಿ ಮಾಡಿ ತಮ್ಮ ಅನಧಿಕೃತ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿ ಕೊಳ್ಳಬಹುದಾಗಿರುತ್ತದೆ. ಈ ಕಾರ್ಯಕ್ರಮದ ಬಗ್ಗೆ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಪಕ ಪ್ರಚಾರ ನೀಡಲಾಗಿರುತ್ತದೆ. ಇದರ ಉಪಯೋಗವನ್ನು ಬಹಳಷ್ಟು ಜನರಿಗೆ ತಲುಪಿಸುವ ಉದ್ದೇಶದಿಂದ ಸಕ್ರಮೀಕರಣಕ್ಕೆ ನಿಗಧಿಪಡಿಸಿದ್ದ ಗಡುವನ್ನು ಮೂರುಬಾರಿ ವಿಸ್ತರಿಸಲಾಗಿದೆ. ಅಂತಿಮವಾಗಿ ಸದರಿ ಅವಧಿಯನ್ನು ದಿನಾಂಕ:28-2-1999ರವರೆಗೆ ನಿಗದಿಪಡಿಸಲಾಗಿತ್ತು. ಅನೇಕಅನಧೀಕೃತ ನೀರಾವರಿ ಪಂಪ್‌ಸೆಟ್‌ಗಳ ಬಳಕೆದಾರರು ಇದರ ಉಪಯೋಗ ಪಡೆದುಕೊಂಡಿದ್ದು, ರಾಜ್ಯಾದ್ಯಂತ ಗುರುತಿಸಲಾಗಿದ್ದ ಒಟ್ಟು 95,977 ಅನಧಿಕೃತ ಪಂಪ್ ಸೆಟ್‌ಗಳ ಪೈಕಿ ಒಟ್ಟು 56,884 ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲಾಗಿದೆ. ಉಳಿದ39113 ಅನಧಿಕೃತ ಪಂಪ್‌ಸೆಟ್‌ಗಳು ಸಕ್ರಮೀಕರಣಗೊಂಡಿರುವುದಿಲ್ಲ. ಸಕ್ರಮೀಕರಣದ ಗಡುವನ್ನು 28-2-99ರ ನಂತರ ವಿಸ್ತರಿಸಿರುವುದಿಲ್ಲ.

ಅನುಬಂಧ

ಕ್ರಮ ಸಂಖ್ಯೆ	ಜಿಲ್ಲೆ	ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ (31-3-20000ದ ಅಂತ್ಯದಲ್ಲಿದ್ದಂತೆ)	ವಾರ್ಷಿಕ ಬಳಕೆ (ದಶಲಕ್ಷ ಯೂನಿಟಿಗಳಲ್ಲಿ)	ಒಂದು ತಿಂಗಳ ಸರಾಸರಿ ವಿದ್ಯುತ್ ಬಳಕೆ (ದಶಲಕ್ಷ ಯೂನಿಟ್‌ಗಳಲ್ಲಿ)
1	2	3	4	5
1.	ಬೆಂಗಳೂರು	1, 12, 899	722.2	60.2
2.	ಬೆಳಗಾಂ	1,24,762	798. 1	66. 5
3.	ಬಳ್ಳಾರಿ	40, 869	261.4	21.8
4.	ಬೀದರ್	40, 255	257.5	21.5
5.	ಬಿಜಾಪುರ	1,07,773	689.4	57.5
6.	ಚಿಕ್ಕಮಗಳೂರು	25, 875	165.5	13.8
7.	ಚಿತ್ರದುರ್ಗ	65, 869	421.4	35. 1
8.	ಕೊಡಗು	3, 657	23.4	1.9
9.	ಧಾರವಾಡ	55, 948	357.9	29.8
10.	ಗುಲ್ಬರ್ಗ	35, 199	225.2	18.8
11.	ಹಾಸನ	31, 024	198.5	16.5

1	2	3	4	5
12.	ಕೋಲಾರ	1, 19, 529	764.6	63.7
13.	ಮಂಡ್ಯ	32, 738	209.4	17.5
14.	ಮೈಸೂರು	57, 101	365.3	30.4
15.	ಉತ್ತರಕನ್ನಡ	27, 125	173.5	14.5
16.	ರಾಯಚೂರು	49, 306	315.4	26.3
17.	ಶಿವಮೊಗ್ಗ	34, 121	218.3	18.2
18.	ದಕ್ಷಿಣಕನ್ನಡ	81, 642	522.3	43.5
19.	ತುಮಕೂರು	1, 19,045	761.5	63.5
	ಒಟ್ಟು ಮೊತ್ತ	**11, 64, 737**	**7, 450.8**	**620.9**